ಶ್ರೀ ಎಂ ಗೋವಿಂದ ಕಾರಜೋಳ: ಮಾಹಿತಿಯನ್ನು ನಾನು ಕೊಡುತ್ತೇನೆ.

ಶ್ರೀ ಹೆಚ್ ಎಸ್ ಮಹದೇವಪ್ರಸಾದ್: ಗ್ರಾಮ ಪಂಚಾಯತಿ ಮಟ್ಟದಲ್ಲಿ ಪ್ರತಿಯೊಂದು ನ್ಯಾಯಬೆಲೆ ಅಂಗಡಿಗೆ ಜಾಗೃತ ಸಮಿತಿಯನ್ನು ಏನು ರಚನೆ ಮಾಡಲಾಗಿದೆ, ಪ್ರತಿ ಸಾರಿ ಆ ನ್ಯಾಯಬೆಲೆ ಅಂಗಡಿಗೆ ಬರುವ ಪದಾರ್ಥಗಳೇನಿವೆ, ಅದು ಆ ನ್ಯಾಯಬೆಲೆ ಅಂಗಡಿಯಲ್ಲಿ ರಿಸೀವ್ ಆಗಿದೆ ಎಂದು 7 ಜನರ ಸಮಿತಿಯಲ್ಲಿ ಕನಿಷ್ಟ 3-4 ಜನ ಸಹಿ ಹಾಕಿದಂಥ ಪತ್ರ ನಿಮ್ಮ ಆಹಾರ ಇಲಾಖೆಯಲ್ಲಿರಬೇಕು. ಎಲ್ಲಾ ನ್ಯಾಯ ಬೆಲೆ ಅಂಗಡಿಗೆ ನಿಮ್ಮ ಫುಡ್ ಕಾರ್ಪೋರೇಷನ್ ನಿಂದ ನೇರವಾಗಿ ಆಹಾರ ಸರಬರಾಜಾದ ಮೇಲೆ ಆ ಸಹಿ ಪಡೆಯುವ ಪ್ರಕ್ರಿಯೆ ಎಲ್ಲೂ ನಡೆಯುತ್ತಿಲ್ಲ. ಆದುದರಿಂದ ಈ ಜಾಗೃತ ಸಮಿತಿ ಕೆಲಸ ಮಾಡುತ್ತಿದೆಯೋ, ಇಲ್ಲವೋ ಎಂಬುದು ಯಾರು ಗಮನಕ್ಕೂ ಬರುತ್ತಿಲ್ಲ, ಅದರ ಬಗ್ಗೆ ಸ್ವಲ್ಪ ಎಚ್ಚರಿಕೆ ವಹಿಸಿ, ನಿಮ್ಮ ಆಹಾರ ಇಲಾಖೆಯಿಂದ ಆ ವಿತರಣೆ ಕೆಲಸ ಸಮರ್ಪಕವಾಗಿ ಆಗುವಂತೆ ಮಾಡಬೇಕು.

ಶ್ರೀ ಎಂ ಗೋವಿಂದ ಕಾರಜೋಳ: ಮಾನ್ಯ ಮಹದೇವಪ್ರಸಾದ್ ಅವರು ಕೂಡ ಆಹಾರ ಮಂತ್ರಿಗಳಾಗಿದ್ದರು, ಆ ವ್ಯವಸ್ಥೆ ಗೊತ್ತಿರುವಂಥವರು, ಇವತ್ತು ಅಲ್ಲಿ ಏನಾಗಿದೆ ಎಂದರೆ, ಜಾಗೃತಿ ವಹಿಸದೇ ರಸೀದಿಗೆ ಸಹಿ ಹಾಕಿ ಕೊಡುವುದು ಅನೇಕ ಗ್ರಾಮಗಳಲ್ಲಿ ನಡೆಯುತ್ತಿದೆ. ಅದಕ್ಕಾಗಿ ಸಾರ್ವಜನಿಕರ ಸಹಕಾರ ಬಹಳ ಅಗತ್ಯವಿದೆ ಎಂದು ನಾನು ಹೇಳಿದ್ದು ಸಾರ್ವಜನಿಕರ ಸಹಕಾರವಿಲ್ಲದೇ ಈ ವ್ಯವಸ್ಥೆ ಸುಧಾರಣೆಯಾಗುವುದಕ್ಕೆ ಸ್ವಲ್ಪ ಕಠಿಣವಾಗಿದೆ, ಅದಕ್ಕೆ ಸರ್ಕಾರ ನಿರ್ದಿಷ್ಟವಾದ ಕ್ರಮ ತೆಗೆದುಕೊಳ್ಳುತ್ತದೆ.

ಆಸ್ಪತ್ರೆಗಳ ಕಟ್ಟಡಕ್ಕೆ ಅನುದಾನ ಪೂರೈಸುವ ಬಗ್ಗೆ.

48(371) ಶ್ರೀ ಸಿದ್ದು ಸವದಿ:(ತೇರದಾಳ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೇರದಾಳ ಮತ್ತು ಬನಹಟ್ಟಿಯಲ್ಲಿಯ ಆಸ್ಪತ್ರೆಗಳ ಕಟ್ಟಡಕ್ಕೆ ಅನುದಾನ ಬೇಡಿ ನಾಲ್ಕಾರು ಅರ್ಜಿಗಳನ್ನು ಸಲ್ಲಿಸಿದ್ದು ಅದಕ್ಕೆ ಎಂದು ಮಂಜೂರಾತಿ ನೀಡಲಾಗುವುದು;

ಆ) ನಗರ ಪ್ರದೇಶಗಳಿದ್ದುದರಿಂದ ರೋಗಿಗಳ ಸಂಖ್ಯೆ ಹೆಚ್ಚಾಗಿದ್ದು ವಾರ್ಡ್‌ಗಳ ಶೌಚಾಲಯಗಳ ಮತ್ತು ಕುಡಿಯುವ ನೀರಿನ ಸಿಬ್ಬಂದಿಗಳ ವಸತಿಗಳ ಸಮಸ್ಯೆಗಳಿದ್ದು ಎಂದಿನಿಂದ ಸರಿಪಡಿಸಲಾಗುವುದು?

ಶ್ರೀ ಬಿ ಶ್ರೀರಾಮುಲು(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ತೆರದಾಳದಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರ, ಬನಹಟ್ಟಿಯಲ್ಲಿಯ ಸಮುದಾಯ ಆರೋಗ್ಯ ಕೇಂದ್ರಗಳು ಸ್ವಂತ ಕಟ್ಟಡಗಳನ್ನು ಹೊಂದಿವೆ. ಕಟ್ಟಡಗಳ ವಾರ್ಷಿಕ ದುರಸ್ತಿ/ನಿರ್ವಹಣೆಗೆ ಜಿಲ್ಲಾ ಪಂಚಾಯತ್ ಅಡಿಯಲ್ಲಿ ಅನುದಾನವನ್ನು ಕಲ್ಪಿಸಲಾಗಿದೆ.

ಆ) ಬನಹಟ್ಟಿ ಸಮುದಾಯ ಆರೋಗ್ಯ ಕೇಂದ್ರವು 2009ನೇ ಸಾಲಿನಲ್ಲಿ 20,660 ಹೊರ ರೋಗಿಗಳಿಗೆ ಹಾಗೂ 1,873 ಒಳ ರೋಗಿಗಳಿಗೆ ಸೇವೆ ಒದಗಿಸಿದೆ. ಇಲ್ಲಿನ ಹಾಸಿಗೆಗಳ ಬಳಕೆ ಪ್ರಮಾಣವು 17.10% ಆಗಿದೆ. ಈ ಆಸ್ಪತ್ರೆಯಲ್ಲಿ 6 ವಸತಿ ಗೃಹಗಳನ್ನು ಸಿಬ್ಬಂದಿ ಉಪಯೋಗಕ್ಕಾಗಿ ನಿರ್ಮಿಸಲಾಗಿದೆ.

ಪ್ರಾಥಮಿಕ ಆರೋಗ್ಯ ಕೇಂದ್ರ ತೆರದಾಳದಲ್ಲಿ 2009ನೇ ಸಾಲಿನಲ್ಲಿ 14,133 ಹೊರ ರೋಗಿಗಳಿಗೆ ಹಾಗೂ 688 ಒಳ ರೋಗಿಗಳಿಗೆ ಸೇವೆ ನೀಡಿದೆ. ಇಲ್ಲಿನ ಹಾಸಿಗೆಗಳ ಬಳಕೆ ಪ್ರಮಾಣವು 31.41% ಆಗಿದೆ. ಈ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ 9 ವಸತಿ ಗೃಹಗಳು ಸಿಬ್ಬಂದಿ ಸೇವೆಗಾಗಿ ಲಭ್ಯವಿವೆ. ಆಸ್ಪತ್ರೆಗಳ ನಿರ್ವಹಣೆಗಾಗಿ ಜಿಲ್ಲಾ ಪಂಚಾಯತ್ ಅನುದಾನದಲ್ಲಿ ಅವಕಾಶವನ್ನು ಕಲ್ಪಿಸಲಾಗಿರುವುದಲ್ಲದೇ, ಪ್ರಾಥಮಿಕ ಆರೋಗ್ಯ ಕೇಂದ್ರ ತೆರದಾಳಕ್ಕೆ ರೂ.1.50 ಲಕ್ಷಗಳು ಹಾಗೂ ಸಮುದಾಯ ಆರೋಗ್ಯ ಕೇಂದ್ರ ಬನಹಟ್ಟಿಗೆ ರೂ.2 ಲಕ್ಷಗಳ ಮುಕ್ತ ನಿಧಿಯನ್ನು ನೀಡಲಾಗಿದ್ದು, ವಿಕೇಂದ್ರೀಕೃತವಾಗಿ ಅವಶ್ಯಕತೆಗಳ ಅನುಸಾರ ಉಪಯೋಗಿಸಲು ಅವಕಾಶ ಕಲ್ಪಿಸಲಾಗಿದೆ.

ಶ್ರೀ ಸಿದ್ದು ಸವದಿ: ಮಾನ್ಯ ಅಧ್ಯಕ್ಷರೆ, ತೆರದಾಳದಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಬನಹಟ್ಟಿಯ ಸಮುದಾಯ ಆರೋಗ್ಯ ಕೇಂದ್ರಗಳು ಸುಮಾರು 20 ವರ್ಷಗಳಿಂದಿರುವ ಆ ಕಟ್ಟಡಗಳು ಸಂಪೂರ್ಣ ಶಿಥಿಲಾವಸ್ಥೆಯಲ್ಲಿದ್ದು ಬೀಳುವ ಹಂತದಲ್ಲಿರುವುದರಿಂದ ಹೊಸ ಕಟ್ಟಡಕ್ಕೆ ಅನುದಾನವನ್ನು ನಾವು ಕೇಳಿದ್ದೇವೆ, ಕೊಟ್ಟಿಲ್ಲ. ಒಂದು ಪ್ರಾಥಮಿಕ ಆರೋಗ್ಯ ಕೇಂದ್ರದ ಸ್ಥಿತಿ ಆ ರೀತಿಯಾಗಿದೆ ಎಂದರೆ, ಅಲ್ಲಿರುವ ಆರೋಗ್ಯ ಕೇಂದ್ರದ ಆವರಣವನ್ನು ಎಲ್ಲರೂ ಶೌಚಾಲಯಕ್ಕೆ ಉಪಯೋಗ ಮಾಡುವಂಥ ಪರಿಸ್ಥಿತಿ ಇದೆ, ಕಾಂಪೌಂಡ್ ವಾಲ್ ಕೂಡ ಅಲ್ಲಿ ಇಲ್ಲ. ಒಂದು ಶೌಚಾಲಯವಿಲ್ಲ, ಬಾತ್ ರೂಂ ಇಲ್ಲ, ಬಹಳ ಕೆಳಮಟ್ಟದ ಸ್ಥಿತಿಯಲ್ಲಿ ಆ ಆಸ್ಪತ್ರೆ ನಡೆಯುತ್ತಿದೆ, ಸ್ವಚ್ಚತಾ ದೃಷ್ಟಿಯಿಂದ ಅಲ್ಲಿ ನೀರಿನ ವ್ಯವಸ್ಥೆಯೇ ಇಲ್ಲ. ಈ ಎಲ್ಲಾ ಕಾರಣಕ್ಕೆ ಆ ಕಟ್ಟಡಗಳ ನಿರ್ಮಾಣಕ್ಕಾಗಿ ಮತ್ತು ಕಾಂಪೌಂಡ್ ನಿರ್ಮಾಣಕ್ಕಾಗಿ, ಶೌಚಾಲಯ, ಬಾತ್ ರೂಂ ನಿರ್ಮಾಣಕ್ಕಾಗಿ ನಾವು ಅನುದಾನವನ್ನು ಕೇಳಿದ್ದೇವೆ. ಕೊಡುವ ಒಂದೂವರೆ ಲಕ್ಷ ರೂಪಾಯಿಗಳ ಅನುದಾನದಲ್ಲಿ ಏನು ಕೆಲಸವನ್ನು ನಾವು ಮಾಡಲಾಗುವುದಿಲ್ಲ. ಆ ಕಾರಣಕ್ಕಾಗಿ ಹೆಚ್ಚಿನ ಅನುದಾನವನ್ನು ಕೊಡಬೇಕು. ತೆರದಾಳ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸುಮಾರು 40,000 ಜನಸಂಖ್ಯೆ ಇದೆ, ಸುತ್ತಮುತ್ತ 10 ಹಳ್ಳಿಗಳಿವೆ. ಅಲ್ಲಿಗೆ ವಿಶೇಷ ಅನುದಾನವನ್ನು ಕೊಡಿ ಎಂದು 4–5 ಸಾರಿ ಸರ್ಕಾರಕ್ಕೆ ಅರ್ಜಿಯನ್ನು ಹಾಕಿದ್ದೇನೆ. ದಯಮಾಡಿ, ಇನ್ನು ಮುಂದಾದರೂ ಅಲ್ಲಿ ಸಿಬ್ಬಂದಿಗಳಿರಬಹುದು, ಅಲ್ಲಿರುವ ವಾರ್ಡುಗಳಿರಬಹುದು ಏನೇನು ಅವಶ್ಯಕತೆಗಳಿವೆ ಅದಕ್ಕೆ ಹೆಚ್ಚಿನ ಅನುದಾನವನ್ನು ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

ಶ್ರೀ ಬಿ ಶ್ರೀರಾಮುಲು: ಮಾನ್ಯ ಅಧ್ಯಕ್ಷರೆ, ತೆರದಾಳ ಮತ್ತು ಬನಹಟ್ಟಿಗೆ ಸಂಬಂಧಿಸಿದಂತೆ ಜಿಲ್ಲಾ ಪಂಚಾಯತಿಯ ಮತಿಯಿಂದ ಸ್ವಲ್ಪ ಅನುದಾನವನ್ನು ಕೊಟ್ಟಿದ್ದಾರೆ. ಆದರೂ ಮಾನ್ಯ ಸದಸ್ಯರು ಅನುದಾನ ಸಾಕಾಗುವುದಿಲ್ಲ, ಶೌಚಾಲಯವಿಲ್ಲ, ದುರಸ್ತಿಯಾಗಬೇಕಾಗಿದೆ ಇದರಿಂದ ತೊಂದರೆಯಾಗುತ್ತಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಬಹುಶ: ಕಾಂಪೌಂಡ್ ವಾಲ್ ಆಗಿರಬಹುದು, ಶೌಚಾಲಯವಾಗಿರಬಹುದು, ಈ ಬಗ್ಗೆ ಮಾನ್ಯ ಸದಸ್ಯರು ಏನು ಎಷ್ಟಿಮೇಟ್

ಮಾಡಿದ್ದಾರೆ ಅದನ್ನು ನನಗೆ ಕೊಟ್ಟರೆ, ಅದಕ್ಕೆ ಯಾವ ರೀತಿಯಾಗಿ ಹಣವನ್ನು ಮಂಜೂರಾತಿ ಮಾಡಿಕೊಡುತ್ತೇನೆ.

ರಾಜ್ಯದಲ್ಲಿರುವ ಭಿಕ್ಷುಕರ ಪುನರ್ವಸತಿ ಕೇಂದ್ರಗಳು

49(393) ಶ್ರೀ ಬಂಡೆಪ್ಪ ಕಾಶೆಂಪೂರ್:(ಬೀದರ್ ದಕ್ಷಿಣ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಭಿಕ್ಷುಕರ ಪುನರ್ವಸತಿ ಕೇಂದ್ರಗಳ ಸಂಖ್ಯೆ ಎಷ್ಟು, ಯಾವುವು ಮತ್ತು ಎಲ್ಲಿವೆ ಪೂರ್ಣ ಮಾಹಿತಿಯನ್ನು ನೀಡುವುದು

ಆ) ಈ ಪುನರ್ವಸತಿ ಕೇಂದ್ರಗಳು ಸುಸಜ್ಜಿತವಾಗಿಯೇ;

ಇ) ಭಿಕ್ಷುಕರುಗಳಿಗೆ ಪುನರ್ವಸತಿ ಕೇಂದ್ರಗಳಲ್ಲಿ ಯಾವ ರೀತಿಯ ಕುಶಲ ಕಲೆಗಳನ್ನು ಕಲಿಸಲಾಗುತ್ತಿದೆ;

ಈ) ಇವರುಗಳಿಗೆ ಈ ಕೇಂದ್ರಗಳಲ್ಲಿ ನೀಡುತ್ತಿರುವ ಮೂಲಸೌಲಭ್ಯಗಳೇನು; ವಿವರಗಳನ್ನು ನೀಡುವುದು;

ಉ) ಈ ಪುನರ್ವಸತಿ ಕೇಂದ್ರಗಳಲ್ಲಿ ಎಷ್ಟು ಜನ ಭಿಕ್ಷುಕರುಗಳಿದ್ದಾರೆ; ಕೇಂದ್ರವಾರು ವಿವರಗಳನ್ನು ನೀಡುವುದು;

ಊ) ಈ ಪುನರ್ವಸತಿ ಕೇಂದ್ರಗಳಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರ ನೀಡುತ್ತಿರುವ ಅನುದಾನದ ಮೊತ್ತ ಎಷ್ಟು; ವಿವರಗಳನ್ನು ನೀಡುವುದು;

ಶ್ರೀ ಡಿ ಸುಧಾಕರ(ಸಮಾಜ ಕಲ್ಯಾಣ ಸಚಿವರು):

ಅ) ಒಟ್ಟು 14. ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ) ಹೌದು.

ಇ) ಹೊಲಿಗೆ ಕಮ್ಮಾರಿಕೆ, ನೇಯ್ಗೆ, ಬಡಗಿ, ಬೆತ್ತ, ತೆಂಗಿನ ನಾರಿನ ಮ್ಯಾಟ್ ತಯಾರಿಕೆ, ಬುಕ್‌ಬೈಡಿಂಗ್, ಫೆನಾಯಿಲ್ ತಯಾರಿಕೆ, ಫೈಲ್‌ರ್ಯಾಪರ್ ತಯಾರಿಕೆ ಮತ್ತು ತೋಟಗಾರಿಕೆಗಳಲ್ಲಿ ತರಬೇತಿ ನೀಡಲಾಗುತ್ತಿದೆ

ಈ) ಪ್ರತಿ ದಿನ ಬೆಳಗಿನ ಉಪಹಾರ, ಕಾಫಿ ಹಾಗೂ ಮಧ್ಯಾಹ್ನ ಮತ್ತು ರಾತ್ರಿ ಊಟ ಸಮವಸ್ತ್ರ, ಹಾಸಿಗೆ-ಹೊದಿಕೆ ವೈದ್ಯಕೀಯ ಚಿಕಿತ್ಸೆ ನೀಡಲಾಗುತ್ತಿದೆ.